ಅಸಲು ದಾವೆ ನಂ.9/2022

ಪಿ.ಡಬ್ಲೂಃ 1- ಮುರುಗೇಶ್ ಬಿನ್ ಅಮಾವಾಸ್ಯ

ದಿನಾಂಕಃ 06/01/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1, 4 ಮತ್ತು 5 ನೇ ಪ್ರತಿವಾದಿಯರ ಪರವಾಗಿ ಶ್ರೀ ಕೆ.ಪಿ.ಎಂ. ವಕೀಲರಿಂದ**

1. ನನ್ನ ತಂದೆಯ ಹೆಸರು ಅಮಾವಾಸ್ಯ ಮತ್ತು ತಾಯಿಯ ಹೆಸರು ಸಾಲಮ್ಮ. ನನ್ನ ತಂದೆ-ತಾಯಿಯು ಹಿಂದು ಆಗಿದ್ದರು ಎಂದರೆ ಸರಿ. ನಮ್ಮ ತಂದೆ-ತಾಯಿಗೆ ಒಟ್ಟು 8 ಜನ ಮಕ್ಕಳು ಇದ್ದು 3 ಗಂಡು ಮತ್ತು 5 ಹೆಣ್ಣು ಮಕ್ಕಳು. ಸದರಿ ಮಕ್ಕಳ ಹೆಸರು ಮೋಗನ್ ರಾಜ್, ನಾನು ಅಂದರೆ ಮುರುಗೇಶ್, ಸುಬ್ರಮಣಿ, ಯಶೋಧ, ಲಕ್ಷ್ಮೀ, ಇಂದರಾಣಿ, ಶಕುಂತಲ ಮತ್ತು ಪಾರ್ವತಿ ಆಗಿರುತ್ತದೆ. ಸದರಿ ಮೋಗನ್ ರಾಜ್ ರವರನ್ನು ಪೀಟರ್ ಮೋಗನ್ ರಾಜ್ ಎಂತಲೂ ಕರೆಯುತ್ತಾರೆ ಎಂದರೆ ಸರಿಯಲ್ಲ. 5 ನೇ ವಾದಿಯು ನನ್ನ ಸಹೋದರಿ ಯಶೋಧರವರ ಮಗ ಆಗಬೇಕು. ನಾವೆಲ್ಲರು ಈಗ ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಧರ್ಮಕ್ಕೆ ಧರ್ಮಾಂತರವಾಗಿರುತ್ತೇವೆ ಎಂದರೆ ಸರಿಯಲ್ಲ ಆದರೆ ಕೇವಲ ಯಶೋಧ, ಲಕ್ಷ್ಮೀ ಮತ್ತು ಶಕುಂತಲರವರು ಆಗಿರುತ್ತಾರೆ.

2. ಕೃಷ್ಣಾಪುರಂ ಗ್ರಾಮದ ಸರ್ವೆ ನಂ.10/2 ವಿಸ್ತೀರ್ಣ 2 ಎಕರೆ 17 ಗುಂಟೆ ಜಮೀನು ನನ್ನ ತಂದೆ ಮತ್ತು ತಾಯಿಗೆ ಸೇರಿತ್ತು ಆದರೆ ಅದಕ್ಕೂ ಮುಂಚೆ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನಮ್ಮ ತಂದೆಗೆ ಸರ್ಕಾರದಿಂದ ಮಂಜೂರಿಯಾಗಿ ಬಂದಿತ್ತು ಆದರೆ ಯಾವಾಗ ಮಾಂಜೂರಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಮಂಜೂರಾದ ವಿಚಾರವನ್ನು ನಾವು ನಮ್ಮ ವಾದ ಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ಸ್ವತ್ತು ನಮ್ಮ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ತೋರಿಸಲು ನಮ್ಮ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ಸ್ವತ್ತು ಅಂದರೆ ದಾವಾ ಸ್ವತ್ತು ಮೂಲವಾಗಿ ಶೇಕ್ ಲಾಲ್ ಬಿನ್ ಶೇಕ್ ಹುಸೇನ್ ರವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಾವು ದಾವಾ ಸ್ವತ್ತಿಗೆ ಸಂಬಂಧಪಟ್ಟ 1965 ನೇ ಸಾಲಿನಿಂದ ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾವು ಕೇವಲ ನಮ್ಮ ತಂದೆಯ ಹೆಸರಿನಲ್ಲಿರುವ ದಾವಾ ಸ್ವತ್ತಿನ ಹಳೆಯ ಪಹಣಿಗಳನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿ. ನಾವು ನಿಜ ಸಂಗತಿಯನ್ನು ಮರೆ ಮಾಚಲು 1965 ರಿಂದ ಪಹಣಿಗಳು ನಮ್ಮ ಹತ್ತಿರ ಇದ್ದರೂ ಸಹ ನಾವು ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವತ್ತೂ ಸರ್ಕಾರದಿಂದ ನಮ್ಮ ತಂದಗೆ ಮಂಜೂರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ತಂದೆಗೆ ಯಾವ ರೀತಿಯಾಗಿ ಬಂದಿತ್ತು ಎಂದು ನಾವು ನಮ್ಮ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

3. ನಾವು ನಮ್ಮ ತಂದೆ-ತಾಯಿಯ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ದಾಖಲೆಯಲ್ಲಿ ಉಲ್ಲೇಖಿಸಿರುವ ದೊರೈರಾಜ್ ರವರು ನನ್ನ ಸಹೋದರಿಯಾದ ಲಕ್ಷ್ಮೀರವರ ಗಂಡ ಆಗಬೇಕು ಮತ್ತು ಐಸಾಕ್

ಅಸಲು ದಾವೆ ನಂ.9/2022

ಪಿ.ಡಬ್ಲೂಃ 1- ಮುರುಗೇಶ್ ಬಿನ್ ಅಮಾವಾಸ್ಯ

ರವರು ನಮ್ಮ ಸೋದರತ್ತೆಯಾದ ಚಿಟೆರೈಯಮ್ಮಾಳ್ ರವರ ಮಗ ಆಗಬೇಕು. ನಿಪಿ-3 ದಾಖಲೆಯನ್ನು ನಾನು ತಿಳಿದುಕೊಂಡು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯಲ್ಲಿರುವ ಆದೇಶದ ಬಗ್ಗೆ ನಮ್ಮ ಕುಟುಂಬಕ್ಕೆ ಮಾಹಿತಿ ಇರುತ್ತದೆ. ಸದರಿ ಮ್ಯುಟೇಶನ್ ಆದೇಶವನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನಿಪಿ-15 ದಾಖಲೆಯು ನೊಂದಣಿಯಾಗಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯು ಕಾನೂನು ಬದ್ಧವಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್